ರಾಜ್ಯದಲ್ಲಿ ಬೆಲೆಗಳು ಏರುತ್ತಿರುವುದರಿಂದ ಕನಿಷ್ಠ ಕೂಲಿಯಂನ್ನು ಹೆಚ್ಚಿಸುವ ಕುರಿತು

೧೨೮೦. **ಶ್ರೀ ಪಂಪಾಪತಿ** (ದಾವಣಗೆರೆ).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ರಾಜ್ಯದಲ್ಲಿ ಶ್ರೀ ಸಾಮಾನ್ಯರು ದಿನನಿತ್ಯ ಉಪಯೋಗಿಸುವ ವಸ್ತುಗಳ ಬೆಲೆ ಏರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨. ಈ ಬೆಲೆ ಏರಿಕೆ ಇಳಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

೩. ಈ ಬೆಲೆ ಏರಿಕೆಯಿಂದ ವೇತನ ಪಡೆಯುವ ಕಾರ್ಮಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೪. ಈ ಕನಿಷ್ಠ ಕೂಲಿ ಕಾರ್ಮಿಕರಿಗೆ ಹೆಚ್ಚಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

**ಶ್ರೀ ಡಿ. ಮಂಜುನಾಥ್** (ಕಾರ್ಮಿಕ ಸಚಿವರು).—

೧) ಬಂದಿದೆ.

೨. ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ, ಖಾದ್ಯ ತೈಲದಲ್ಲಿ ಆಮದಾದ ತಾಳೆಎಣ್ಣೆ, ಸ್ವಲ್ಪ ವಂಟ್ಪಗೆ ಜೋಳ ರಾಗಿ, ಮುಂತಾದ ಅಗತ್ಯ ವಸ್ತುಗಳೆನ್ನು ಸಾರ್ವಜನಿಕ ವಿತರಣಾ ರೀತ್ಯಾ ನ್ಯಾಯಾ ಬೆಲೆ ಅಂಗಡಿಗಳ ಮೂಲಕ ಜನಸಾಮಾನ್ಯರಿಗೆ ಮತ್ತು ಬಡ ಜನರಿಗೆ ನಿಗದಿಪಡಿಸಿದ ಬೆಲೆಯಲ್ಲಿ ಸರಬರಾಜು ಮಾಡಲಾಗುತ್ತಿದೆ. ಇದರಿಂದ ಮುಕ್ತ ಮಾರುಕಟ್ಟೆಯಲ್ಲಿ ಸಂಬಂಧಿಸಿದ ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಾಗದಂತೆ ಪರಿಣಾಮ ಬೀರಿದೆ.

೩. ಬಂದಿದೆ.

೪. ಗ್ರಾಹಕ ಬೆಲೆ ಸೂಚ್ಯಂಕದ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನವನ್ನು ಆಗಿಂದಾಗ್ಗೆ ಪರಿಷ್ಕರಿಸಂತ್ತಿದೆ. ಹಾಗೂ ಜೀವನ ವೆಚ್ಚ ಭತ್ಯೆಯಂನ್ನು ಕನಿಷ್ಠ ವೇತನದ ಜೊತೆಗೆ ಸೇರಿಸಿದೆ.

ರಾಜ್ಯದ ಕೈಗಾರಿಕೆಗಳಲ್ಲಿ ಕನಿಷ್ಠ ವೇತನವನ್ನು ನಿಗದಿ ಮಾಡುವ ಬಗ್ಗೆ

೧೮೫೮. **ಶ್ರೀ ಎನ್. ಎಂ. ಅಡ್ಡಂತಾಯ** (ಸುರತ್ಕಲ್).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ ?

೧. ಸರ್ಕಾರದವರು ಕನಿಷ್ಠ ವೇತನವನ್ನು ಘೋಷಣೆ ಮಾಡಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

೨. ಎಷ್ಟು ಕೈಗಾರಿಕೆಗಳನ್ನು ಈ ಕನಿಷ್ಠ ವೇತನ ನೀಡದಿರುವಂತೆ ಮಾಲೀಕರು ತಡೆಯಾಜ್ಞೆ ತಂದಿದ್ದಾರೆ ?

೩. ಈ ತಡೆಯಾಜ್ಞೆಗಳನ್ನು ತೆರವು ಮಾಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

**ಶ್ರೀ ಡಿ. ಮಂಜುನಾಥ್** (ಕಾರ್ಮಿಕ ಮಂತ್ರಿಗಳು).—

೧. ೩೧.

೨. ೩೭.

೩. ಉಚ್ಚನ್ಯಾಯಾಲಯವು ಇತ್ತೀಚೆಗೆ ಈ ಪ್ರಕರಣಗಳನ್ನು ವಿಲೇವಾರಿ ಮಾಡಿದೆ.

ಬೇಲೂರಿನಲ್ಲಿ ನ್ಯಾಯಾಲಯ ಸ್ಥಾಪಿಸುವ ಬಗ್ಗೆ

೧೯೯೭. **ಶ್ರೀ ಎಚ್. ಕೆ. ಕುಮಾರಸ್ವಾಮಿ** (ಬೇಲೂರು).— ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬೇಲೂರಿನಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸ್ಥಾಪಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ ?